**ಘನ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳವರ ನ್ಯಾಯಾಲಯ**
**ತಿ.ನರಸೀಪುರ**

ಅ.ದಾ.ಸಂಖ್ಯೆ:152/2022

ವಾದಿ : ಶಿವರುದ್ರಮ್ಮ .ಆರ್

ಪ್ರತಿವಾದಿಗಳು : ರಾಜಶೇಖರ ಎನ್.ಆರ್ ಮತ್ತು ಇತರರು

ಸಾಕ್ಷಿದಾರರ ಹೆಸರು : ಮಲ್ಲಿಕಾರ್ಜುನಸ್ವಾಮಿ
ತಂದೆಯ ಹೆಸರು : ಲೇಟ್ ಗುರುಮಲ್ಲಪ್ಪ
ವಯಸ್ಸು : 60 ವರ್ಷಗಳು
ವೃತ್ತಿ : ವ್ಯವಸಾಯ
ವಾಸ : ನೆರಗ್ಯಾತನಹಳ್ಳಿ ಗ್ರಾಮ

PW-2
9/6/26.

**ಪ್ರಮಾಣ ಪತ್ರದ ಮೂಲಕ ವಾದಿಯ ಪರ ಸಾಕ್ಷಿಯ ಮುಖ್ಯ ವಿಚಾರಣೆ**

ಮೇಲ್ಕಂಡ ಪ್ರಕರಣದ ವಾದಿಯ ಪರ ಸಾಕ್ಷಿದಾರನಾದ ಮಲ್ಲಿಕಾರ್ಜುನಸ್ವಾಮಿ ಆದ ನಾನು ದೇವರ ಹೆಸರಿನಲ್ಲಿ ಪ್ರಮಾಣೀಕರಿಸುವುದೇನೆಂದರೇ,

ನನಗೆ ವಾದಿ ಶಿವರುದ್ರಮ್ಮ .ಆರ್ ಮತ್ತು ಪ್ರತಿವಾದಿಗಳಾದ ರಾಜಶೇಖರ್ .ಎನ್.ಆರ್, ಮಹದೇವೇಸ್ವಾಮಿ ಮತ್ತು ಎನ್.ಆರ್ ಚಂದ್ರಶೇಖರ್ ಗೊತ್ತು ದಾವಾ ಷೆಡ್ಯೂಲ್ ಸ್ವತ್ತುಗಳು ಗೊತ್ತು. ಪ್ರಕರಣದ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ದಾವಾ ಷೆಡ್ಯೂಲ್ ಸ್ವತ್ತುಗಳು ಪಿತ್ರಾರ್ಜಿತ ಒಟ್ಟು ಕುಟುಂಬದ ಸ್ವತ್ತುಗಳಾಗಿರುತ್ತದೆ. ದಾವಾಷೆಡ್ಯೂಲ್ ಸ್ವತ್ತುಗಳು ಈ ವರೆವಿಗೂ ಗಡಿ ಗುರ್ತಿಸಿ ವಿಭಾಗವಾಗಿರುವುದಿಲ್ಲ. ವಾದಿಯು ನನ್ನ ಸಮಕ್ಷಮ ಭಾಗ ಕೇಳಿರುತ್ತಾರೆ. ಆದರೆ ಯಾವುದೇ ಪ್ರಯೋಜನವಾಗಿರುವುದಿಲ್ಲ. ವಾದಿಯು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಭಾಗಾಂಶ ಪಡೆಯುವ ಹಕ್ಕುಳ್ಳವರಾಗಿದ್ದಾರೆ.

ಮೇಲ್ಕಂಡ ಎಲ್ಲಾ ಸಂಗತಿಗಳು ಸತ್ಯವಾಗಿದೆ ಎಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಈ ಪ್ರಮಾಣಪತ್ರಕ್ಕೆ ನನ್ನ ಸಹಿ ಹಾಕಿರುತ್ತೇನೆ.

ಗುರುತಿಸುವವರು

NOTARY
NANDISH K.K.
Reg. No. Law-LCL/250/2022
T. Narasipura Revenue Taluk
Mysuru District
Expiry Date
18-07-2029
GOVERNMENT OF KARNATAKA

ವಕೀಲರು

ಘೋಷಿಸುವವರು

ದಿನಾಂಕ : 9/6/26
ಸ್ಥಳ : ತಿ-ನರಸೀಪುರ

**ಸಾಕ್ಷಿಗೆ ದಿನಾಂಕಃ 09.06.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಕೆ.ಎಂ.ಯು. ವಕೀಲರಿಂದಃ**

ಇಂದು ನಾನು ನನ್ನ ಸಾಕ್ಷಿಯ ವಿಚಾರಣೆ ಕುರಿತಂತೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳೆಲ್ಲವೂ ಸತ್ಯವಾಗಿರುತ್ತದೆ ಅದನ್ನು ನಾನೇ ನಮ್ಮ ವಕೀಲರ ಮೂಲಕ ಹೇಳಿ ಬರೆಸಿರುತ್ತೇನೆ ಮತ್ತು ಅದಕ್ಕೆ ಸಹಿ ಹಾಕಿರುತ್ತೇನೆ.

**ಪಾಟೀ ಸವಾಲು: 3 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಎ. ಎಲ್.ಎಸ್. ರವರಿಂದ :**

ವಾದಿಯು ಎಷ್ಟು ಸ್ವತ್ತುಗಳಿಗೆ ಈ ದಾವೆಯನನ್ನು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯ ಕುಟುಂಬಕ್ಕೆ ಸೇರಿದ ಆಸ್ತಿಗಳು ಎಷ್ಟು ಇರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯ ಹೇಳಿಕೆಯ ಮೇರೆಗೆ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಬಗ್ಗೆ ನನಗೆ ಮಾಹಿತಿ ಇಲ್ಲದೆ ಇದ್ದರೂ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಓ.**

9/6/26

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**